# ಠಕ್ಕ ಸಂತರು

ಅಧಿಕೃತ ನೋಟುಗಳ ನಡುವೆ ಖೋಟಾ ನೋಟುಗಳು ನುಸುಳಿಕೊಂಡು ಬೆಲೆ ಗಿಟ್ಟಿಸುತ್ತಾ ಕೆಲಕಾಲ ಚಲಾವಣೆಯಲ್ಲಿರುತ್ತವೆ. ಹಾಗೆಯೆ ಧಾರ್ಮಿಕ ಸಂತರ ನಡುವೆ ಖೋಟಾ ಸಂತರುಗಳು ಇರುತ್ತಾರೆಂದರೆ ನಂಬಲಾದೀತೆ? ಇದು ನಿಜ! ಭಾರತದಲ್ಲಿ ಕ್ಷುದ್ರದೇವತೆಗಳಿರುತ್ತಾರೆ. ಶೂದ್ರಾತಿಶೂದ್ರರಿಂದ ಪೂಜೆಗೊಳ್ಳುವ ಮಾರಿ ಮಸಣೆಯರು, ಉರಿಕಾತವ್ವ, ಕೆಂಚಮ್ಮ ಇತ್ಯಾದಿಗಳು ಶಿಷ್ಟದೇವತೆಗಳ ವಿರುದ್ಧವೇ ಪ್ರತಿಷ್ಠಾಪಿಸಲ್ಪಟ್ಟವರು. ಆದರೆ ಇವರೆಲ್ಲರೂ ಶಿಷ್ಟ ಸಂಪ್ರದಾಯದಿಂದ ಹೊರಗಿರಿಸಲ್ಪಟ್ಟ ಕೆಳವರ್ಗದ ಅಮಾಯಕರಿಂದ ಸೃಷ್ಟಿಸಲ್ಪಟ್ಟವರು. ಈಗ ಅವರೂ ಸಂಸ್ಕೃತೀಕರಣಕ್ಕೆ ಒಳಪಟ್ಟು ಶಿಷ್ಟದೇವತೆಗಳನ್ನು ಆರಾಧಿಸಲು ಪ್ರಾರಂಭಿಸಿರುವುದರಿಂದ ಕ್ಷುದ್ರದೇವತೆಗಳ ಸಂಖ್ಯೆ ಕಡಿಮೆಯಾಗುತ್ತಿರಬಹುದೇನೊ. ಅದೇನೇ ಇರಲಿ, ದಕ್ಷಿಣ ಅಮೆರಿಕದ ವೆನೆಜುಯೇಲಾ, ಕೊಲಂಬಿಯಾ ಮತ್ತಿತರ ಲ್ಯಾಟಿನ್ ದೇಶಗಳಲ್ಲಿ ಖೋಟಾ ಸಂತರನ್ನು ಸೃಷ್ಟಿಸಲಾಗುತ್ತದೆ. ಇವರೇ 'ಠಕ್ಕ ಸಂತರು' ಅಮಾಯಕರು, ಮುಗ್ಧರು ಕೇವಲ ಭಾರತದಲ್ಲಷ್ಟೇ ಅಲ್ಲ ಪ್ರಪಂಚದಾದ್ಯಂತ ಇದ್ದಾರೆ ಎನ್ನುವುದಕ್ಕೆ ಇದೊಂದು ಜ್ವಲಂತ ಉದಾಹರಣೆ.

ಕೆಥೋಲಿಕ ಕ್ರೈಸ್ತ ಪಂಥದಲ್ಲಿ ಸನ್ಯಾಸಿಗಳಲ್ಲಿಯೆ ಪರಿಶುದ್ಧರನ್ನು, ಪವಾಡ ಪುರುಷ/ ಸ್ತ್ರೀಯರನ್ನು (ಪವಾಡಗಳನ್ನು ಅಳೆಯುವ ಮಾನದಂಡಗಳು ವೆಟಿಕನ್ ಕೇಂದ್ರದಲ್ಲಿವೆ) ಸಂತರನ್ನಾಗಿಸಿ ಅಜರಾಮರಗೊಳಿಸುವ ಪರಿಪಾಠವಿದೆ. ಅವರು ಸರ್ವದಾ ಪೂಜನೀಯರು. ಅದರ ನಕಲು ಎಂಬಂತೆ ಸ್ಥಳೀಯ ದುಷ್ಟಾಗ್ರೇಸರರನ್ನು ಸಂತರನ್ನಾಗಿಸುವ ಕಾರ್ಯ ಈ ದೇಶಗಳಲ್ಲಿ ಅನಧಿಕೃತವಾಗಿ ನಡೆಯುತ್ತದೆ. 1989 ರಲ್ಲಿ ರಾಜಧಾನಿ ಕ್ಯಾರಕಸ್ ನಗರದಲ್ಲಿ ಆರ್ಥಿಕ ಮುಗ್ಗಟ್ಟಿನ ಭೀತಿಯಿಂದ ಜನ ದಂಗೆಯೆದ್ದರು. ಆಗ ನಡೆದ ಕೊಲೆ, ಹಿಂಸಾಚಾರ, ದೌರ್ಜನ್ಯಗಳು ಒಂದು ಹೊಸ ಪಂಥದ (Cult) ಹುಟ್ಟಿಗೆ ಕಾರಣವಾಯಿತು. ಅದರ ಹೆಸರು 'ಮರಿಯಾ ಲಯೋಂಝಾ'. ಇದಕ್ಕೆ ಚರ್ಚಿನ ಮಾನ್ಯತೆಯಿಲ್ಲ. ಆದರೂ ಹಿಂಬಾಲಕರ ಕೊರತೆಯಿಲ್ಲ.

ಈ ಪಂಥದ ಜನರಿಗೆ ಠಕ್ಕರು, ಡ್ರಗ್ ಮಾಫಿಯಾಗಳು, ದಗಲ್ಬಾಜಿಗಳು, ಕೊಲೆಗಡುಕರು, ಲೂಟಿಕೋರರು ಧರ್ಮಗುರುಗಳಿಗೆ ಸಮಾನರು. ಇವರಲ್ಲಿ ಯಾರು ಬಲಿಷ್ಠರೋ ಅವರನ್ನು ಆಯ್ದು ಸಂತ ಪಟ್ಟ ಕಟ್ಟಲಾಗುತ್ತದೆ. ಇಂಥವರನ್ನು 'ಸಾಂಟೋಸ್ ಮಲಾಂಡ್ರೋಸ್' (Thug Saints) ಎನ್ನುತ್ತಾರೆ. ಅಂದರೆ 'ಠಕ್ಕ ಸಂತರು' ಎಂದರ್ಥ. ಈ ಠಕ್ಕ ಸಂತರ ವೇಷಭೂಷಣಗಳೂ ಅಷ್ಟೇ ವಿಚಿತ್ರವಾಗಿರುತ್ತವೆ. ಜೀನ್ಸ್ ತೊಟ್ಟು, ಮಿಲಿಟರಿ ಟೋಪಿ ಧರಿಸಿ, ಪಿಸ್ತೂಲು, ಎ.ಕೆ 47 ರೈಫಲ್ ಗಳನ್ನು ಹಿಡಿದು, ಧಿಮಾಕಿನ ಮುಖ ಚಹರೆಯೊಂದಿಗೆ ಚುಟ್ಟಾ ಸೇದುತ್ತಾ ವಿವಿಧ ಭಂಗಿಯಲ್ಲಿ ವಿರಾಜಮಾನರಾಗಿರುತ್ತಾರೆ.

ಊಹಿಸಬಲ್ಲಂತೆ ಇವರು ಅಷ್ಟಿಷ್ಟು ರಾಬಿನ್‌ಹುಡ್ ಕೆಲಸಗಳನ್ನು ಮಾಡಿರುತ್ತಾರೆ. ಹೆಚ್ಚಾಗಿ ಹರೆಯದಲ್ಲೇ ಅಥವಾ ಮಧ್ಯ ವಯಸ್ಸಿನಲ್ಲಿ ಪೋಲೀಸಿನವರಿಂದಲೊ ಅಥವಾ ಸೇನೆಯಿಂದಲೊ ಕೊಲ್ಲಲ್ಪಡುತ್ತಾರೆ. ಪೋಲೀಸರಿಗೆ ಅಲ್ಲಿ ಕಿಮ್ಮತ್ತು ಇಲ್ಲವಂತೆ. ಯಾಕೆಂದರೆ ಅವರೇ ದರೋಡೆ ಮಾಡಬಹುದು ಅಥವಾ ಕೊಲೆಯನ್ನೂ ಮಾಡಬಹುದು. ಆದ್ದರಿಂದ ಹೆಚ್ಚಿನ ಸಮಯದಲ್ಲಿ ನಾಗರಿಕ ಕಾನೂನು ಪಾಲನೆ ಸೇನಾ ಸಿಬ್ಬಂದಿಯಿಂದಲೇ ನಡೆಯುತ್ತದೆ. ಅಲ್ಲಿನ ಕಾರಾಗೃಹಗಳು ತುಂಬಿ ತುಳುಕುತ್ತಿರುತ್ತವೆ. ಅವುಗಳ ನಿರ್ವಹಣೆ ಸೇನೆಯಿಂದಲೂ ಸಾಧ್ಯವಾಗದಾಗ ಮಾಫಿಯಾಗಳೇ ಅದರ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಾರೆ. ಸ್ವೇಚ್ಛಾಚಾರ ಮತ್ತು ಭ್ರಷ್ಟಾಚಾರ ಒಂದು ರಾಷ್ಟ್ರವನ್ನು ಯಾವ ಮಟ್ಟಕ್ಕೆ ಇಳಿಸಬಹುದೆಂಬುದಕ್ಕೆ ಇದೊಂದು ಉದಾಹರಣೆ.

ಸಂತ ಪಟ್ಟಾಭಿಶಕ್ತನಾದವನ ಗೋರಿಯ ಮೇಲೆ ಒಂದು ಪುಟ್ಟ ಗುಡಿಯನ್ನು ಕಟ್ಟಲಾಗುತ್ತದೆ. ದಿನವೂ ಅಲ್ಲಿಗೆ ಬರುವ ಭಕ್ತರು ಹೂವುಗಳನ್ನು ತಂದು ಪೇರಿಸುತ್ತಾರೆ. ಮದ್ಯ, ಮಾಂಸ ಮತ್ತು ಸಿಗರೇಟು ಒಳಗೊಂಡಂತೆ ತಮಗಿಷ್ಟವಾದ ಕೊಡುಗೆಗಳನ್ನು ನೀಡುತ್ತಾರೆ. ಆ ಠಕ್ಕ ಸಂತನಿಂದ ತಮಗಾದ ಲಾಭಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಾರೆ. ಅಲ್ಲಿಗೆ ಬರುವವರಲ್ಲಿ ಠಕ್ಕ ಸಂತತಿಯವರೇ ಹೆಚ್ಚು. ತಮ್ಮ ದುಸ್ಸಾಹಸಗಳು ನೆರವೇರುವಂತೆ ಬೇಡಿಕೆ ಇಡಲು, ನೆರವೇರಿದಾಗ ಕಾಣಿಕೆ ಸಲ್ಲಿಸಲು ಬರುತ್ತಾರೆ. ನಮ್ಮಲ್ಲಿಯೂ ಸಹ ವೀರಪ್ಪನ್ ಮತ್ತು ಆತನ ಸಹಚರರು ಈ ಪರಿಪಾಠವನ್ನಿಟ್ಟುಕೊಂಡಿದ್ದರು. ಗಂಧದ ಮರಗಳನ್ನು ಕಡಿಯುವುದು, ಆನೆಗಳನ್ನು ಕೊಂದು ಅವುಗಳ ದಂತಗಳನ್ನು ಕಳ್ಳಸಾಗಣೆ ಮಾಡುವುದಕ್ಕೂ ಮುಂಚೆ ಅವರು ಕುಲದೇವತೆಗೆ ಪ್ರಾಣಿಬಲಿ ಕೊಟ್ಟು ವಿಸ್ತೃತ ಪೂಜೆ ನೆರವೇರಿಸುತ್ತಿದ್ದರು. ಮೆರಿಡಾದ ಮಹಿಳೆಯರ ಹಾಗೆ; ನನ್ನ ಮಗ ಮದ್ದುಸೇವನೆಯಿಂದ ದೂರವಿರಲಿ, ನನ್ನ ಗಂಡ ಸೆರೆಮನೆಯಿಂದ ಬೇಗ ಮನೆಗೆ ಬರಲಿ, ನನ್ನ ಪ್ರೇಮಿ ಮಾಫಿಯಾದಿಂದ ಬಿಡಿಸಿಕೊಳ್ಳಲಿ ಇತ್ಯಾದಿ ಬೇಡಿಕೆಗಳೊಂದಿಗೆ ಬರುತ್ತಾರೆ. ಇವೆಲ್ಲವನ್ನೂ ಮಾಡಿದವರಿಂದಲೇ ಅವುಗಳಿಂದ ಮುಕ್ತಿಯನ್ನು ಬಯಸುವುದು ವಿಚಿತ್ರವೆನಿಸುತ್ತಿದೆಯಲ್ಲವೆ? ಆದರೂ ಸತ್ಯ.

ಇಲ್ಲಿಯೂ ಈಗ ಮಹಾತ್ಮ ಗಾಂಧಿಯನ್ನು ಹತ್ಯೆಗೈದ ನಾಥೂರಾಮ್ ಗೋಡ್ಸೆಗೆ ದೇವಾಲಯ ನಿರ್ಮಿಸುವ ಹುನ್ನಾರ ನಡೆಯುತ್ತಿದೆ. ಇದು ಕೆಳವರ್ಗದ ಮುಗ್ಧತೆಯಲ್ಲ. ಬದಲಾಗಿ ಬಲಿಷ್ಠ ಬಣವೊಂದರಿಂದ ದುಷ್ಟತನವನ್ನು ಮೆರೆಯುವ ಸಾಹಸ. ಸಮಾಜವಿರೋಧಿ ಶಕ್ತಿಗಳ ಕುಹಕ. ಹಾಗೇನಾದರೂ ಆದರೆ ಭಾರತದಲ್ಲೂ ಒಬ್ಬ ಠಕ್ಕ ಸಂತನ ಉದಯವಾಗುತ್ತದೆ.

■ ಮೂಚಿ

## ಮಾತೇ ಮುತ್ತು

★ ಯಾವುದು ಏಕತೆಯನ್ನು ಉಂಟು ಮಾಡುವುದೋ ಅದೇ ಒಳಿತು. ಯಾವುದು ಪ್ರತ್ಯೇಕತೆಯನ್ನು ಉಂಟು ಮಾಡುತ್ತದೋ ಅದೇ ಕೆಡುಕು.

-ಸ್ವಾಮಿ ವಿವೇಕಾನಂದ

★ ಕಲಿಯುವಿಕೆ ಇಲ್ಲದ ಸ್ವಾತಂತ್ರ್ಯ ಯಾವತ್ತೂ ಅಪಾಯಕರ; ಸ್ವಾತಂತ್ರ್ಯ ಇಲ್ಲದ ಕಲಿಯುವಿಕೆ ಬರಿಯ ಸ್ವಮೋಹ.

-ಜಾನ್ ಎಫ್ ಕೆನೆಡಿ

★ ಒಬ್ಬಂಟಿತನ ಮತ್ತು ನಾವು ಅನಪೇಕ್ಷಿತರೆಂಬ ಭಾವನೆಯೇ ನಿಜವಾದ ಬಡತನ.

-ಮದರ್ ತೆರೆಸಾ

★ ಪ್ರಾರ್ಥನೆ ಎನ್ನುವುದು ಮುಂಜಾನೆಯ ಕೀಲಿಕೈ ಮತ್ತು ಸಂಜೆಯ ಬೀಗ.

-ಮಹಾತ್ಮ ಗಾಂಧಿ

★ ಹೆಣ್ಣುಮಗಳಿಗೆ ಅವಳ ಅಳತೆಗೆ ಸರಿಯಾದ ಶೂಗಳನ್ನು ಕೊಡಿ; ಅವಳು ಜಗತ್ತನ್ನೇ ಗೆಲ್ಲಬಲ್ಲಳು.

-ಮರ್ಲಿನ್ ಮನ್ರೋ

★ ಭವಿಷ್ಯವು, ತಮ್ಮ ಕನಸುಗಳ ಸೌಂದರ್ಯದ ಬಗ್ಗೆ ನಂಬಿಕೆ ಇರುವವರಿಗೆ ಸೇರಿದೆ.

-ಎಲೀನರ್ ರೂಸ್‌ವೆಲ್ಟ್

★ ಬುದ್ಧಿಮತ್ತೆಯ ನಿಜವಾದ ಗುರುತು ಜ್ಞಾನ ಅಲ್ಲ, ಕಲ್ಪನಾಶಕ್ತಿ.

-ಆಲ್ಬರ್ಟ್ ಐನ್‌ಸ್ಟೀನ್

★ ಕೋಪ ಎನ್ನುವುದು ಆ್ಯಸಿಡ್ ಇದ್ದ ಹಾಗೆ. ಅದನ್ನು ಶೇಖರಿಸಿಟ್ಟ ಬಾಟಲಿಗಿಂತ, ಸುರಿದ ಜಾಗಕ್ಕೇ ಹೆಚ್ಚು ಹಾನಿ ಉಂಟು ಮಾಡುತ್ತದೆ.

-ಮಾರ್ಕ್ ಟ್ವೈನ್

★ ಮಹತ್ವಾಕಾಂಕ್ಷೆ ಇಲ್ಲದ ಬುದ್ಧಿವಂತಿಕೆ ರೆಕ್ಕೆಯಿಲ್ಲದ ಹಕ್ಕಿಯ ಹಾಗೆ.

-ಸಾಲ್ವೆಡೋರ್ ಡಾಲಿ

★ ಪ್ರತಿಯೊಬ್ಬರೂ ನಿಮಗೆ ನೋವುಂಟು ಮಾಡುವವರೇ. ಆದರೆ ಯಾರು ಉಂಟು ಮಾಡಿದ ನೋವಿನ ಬಗ್ಗೆ ದುಃಖಿಸಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾಗಿರಿ.

-ಬಾಬ್ ಮಾರ್ಲೆ

★ ಪ್ರಜಾಪ್ರಭುತ್ವದಲ್ಲಿ ಶ್ರೀಮಂತರಿಗಿಂತ ಬಡವರೇ ಹೆಚ್ಚು ಬಲಶಾಲಿಗಳು. ಯಾಕೆಂದರೆ ಬಡವರ ಸಂಖ್ಯೆ ಹೆಚ್ಚಿರುತ್ತದೆ.

-ಅರಿಸ್ಟಾಟಲ್

★ ಸಾವು ಎನ್ನುವುದು ಜೀವನದ ವಿರುದ್ಧ ಅಲ್ಲ; ಜೀವನದ ಒಂದು ಅಂಗ.

-ಹರುಕಿ ಮುರಕಮಿ